

ಇರಿ'

'ನಿಮ್ಮಪ್ಪನ ಮನೆಯಿಂದ ತಿಕ್ತೀಯಾ ಬೇವರ್ಸಿ..., ವಾಕ್ಯ ಪೂರ್ತಿಯಾಗಿರಲಿಲ್ಲ, ಪೈಡ್ ಅಂತ ಬೀಸಿದಳು. ಚಿತ್ರಾನ್ನ ಕಲಸಿದ್ದ ಕೈಯಲ್ಲೇ ಹೊಡೆದಿದ್ದರಿಂದ ಅವನ ಎಡಗಡೆ ಕೆನ್ನೆಯೆಲ್ಲಾ ಹಳದಿಮಯ. ಮುಖದ ತುಂಬಾ ಅನ್ನದ ಅಗುಳು, ಬೆಂದ ಈರುಳ್ಳಿ ಪೀಸುಗಳು ಮೆತ್ತಿಕೊಂಡವು.

'ನಂಗೇ ವಡಿತಿಯಾ ಯೋಳ್ ಮಿಂಡ್ರಿಗುಟ್ಟೋಳೆ...'

ಮತ್ತೊಮ್ಮೆ ಬೀಸಿದಳು. ಈ ಸಲ ಕೈಯಲ್ಲಿದ್ದ ಡಬರಿಯನ್ನೇ. ಅದು ಅವನ ತಲೆಗೆ ತಗುಲಿ ಠಣ್ ಎಂಬ ಸದ್ದು ಬಂದಿತು. ಮೂರ್ತಪ್ಪನಿಗೆ ಕಣ್ಣು ಮಂಜಾದವು. ತಲೆ ಧಿಂ ಅಂದಿತು. ಸಾವರಿಸಿಕೊಂಡು ನೋಡುವಾಗ್ಗೆ ಪದ್ದಮ್ಮ ಗೇಟನ್ನು ದಢಾರನೆ ತೆಗೆದು ಹೋಗುತ್ತಿದ್ದಳು. ಆಕೆ ತೆಗೆದ ರಭಸಕ್ಕೆ ಕಿರ್ ಕಿರ್ ಎನ್ನುತ್ತಾ ಗೇಟು ಹಿಂದಕ್ಕೂ ಮುಂದಕ್ಕೂ ವಾಲಾಡುತ್ತಿತ್ತು. ಬರೀ ಕೈಯಲ್ಲಿ ಮನೆಗೆ ಬಂದ ಮಗಳನ್ನು ಆಕೆಯ ಅಮ್ಮ ಯಾಕೆ, ಏನು, ಎತ್ತ ಅಂತ ಒಂದು ಮಾತು ಕೇಳಲಿಲ್ಲ. ಸೀದಾ ಬಚ್ಚಲಿಗೆ ಕಳಿಸಿದಳು. ಸ್ನಾನ ಮಾಡಿ ಬಂದ ಮಗಳನ್ನು ಕೂರಿಸಿ ಬಿಸಿ ಬಿಸಿ ಅನ್ನಸಾಂಬಾರು ಬಡಿಸಿದಳು. ಒಂದೆರಡು ತುತ್ತು ತಿಂದವಳೇ ದುಃಖಿಸಿ ದುಃಖಿಸಿ ಅಳಲು ಶುರು ಮಾಡಿದಳು ಪದ್ದಮ್ಮ. ಎಷ್ಟು ಸಮಾಧಾನ ಮಾಡಿದರೂ ನಿಲ್ಲದ ಅಳು.





ಒಂದು ವಾರ ಹೀಗೇ ಕಳೆಯಿತು. ಸುಮ್ಮನೆ ಮಲಗಿ ಸೂರು ನೋಡುತ್ತಿದ್ದಳು. ಒಮ್ಮೊಮ್ಮೆ ಅಮ್ಮ ಪಕ್ಕದಲ್ಲಿ ಬಂದು ಕೂರುತ್ತಿದ್ದರು. ಹತ್ತಿರದ ಗೆಳತಿಯರು, ಪರಿಚಯದವರು ಮಾತನಾಡಿಸಲು ಬರುತ್ತಿದ್ದರು. ಆರನೇ ದಿನ ದಿಢೀರಾಗಿ ವಾಪಸು ಹೋಗುವ ಮಾತಾಡಿದಳು. ಅಮ್ಮನಿಗೆ ದಿಕ್ಕೇ ತೋಚಲಿಲ್ಲ. ಸುದ್ದಿ ತಿಳಿದು ಆಕೆಯ ಗೆಳತಿ ಸರೋಜ ಬಂದಳು. ರೂಮಿನಲ್ಲಿ ಕುಳಿತು ಇಬ್ಬರೇ ಮಾತಾಡುತ್ತಿದ್ದರು.

'ಬಿಟ್ಹಾಕೆ, ಡಿಗ್ರಿ ಓದಿದ್ದಿಯ, ಗಾರ್ಮೆಂಟ್ಸಲ್ಲೋ, ಯಾವ್ದಾರ ಸ್ಕೂಲಲ್ಲೋ ಕೆಲಸ ಮಾಡಿವಂತೆ'

'ಗಂಡಂಗೆ ಸೊಂಟ ಬಿದ್ದೋಗಿದೆ, ಅದಕ್ಕೇ ಹೋಗಿದಾಳೆ ಅಂದ್ಕೋತಾರೆ ಕಣೆ, ಅದು ನಂಗಿಷ್ಟ ಇಲ್ಲ'

'ಯಾವನು ಏನಾದ್ರೂ ಅಂದ್ಕಳ್ಳಿ ಬಿಡೇ, ಸೊಂಟ ಬಿದ್ದೋಗಿರದು ನಿಜಾ ತಾನೆ' ಪದ್ದಮ್ಮನ ಮೌನ ಮತ್ತು ನಿಟ್ಟುಸಿರುಗಳೇ ಉತ್ತರವಾಗಿದ್ದವು.

ಸಂಜೆಯವರೆಗೂ ಇದ್ದು ಸರೋಜ ಹೊರಟು ಹೋದಳು. ಮಾರನೆ ದಿನ ಬೆಳಿಗ್ಗೆ ಗಂಡನ ಮನೆಗೆ ಹೋಗುವ ಬಸ್ಸಿನಲ್ಲಿ ಕುಳಿತಿದ್ದಳು ಪದ್ದಮ್ಮ. ವಾಪಸು ಬಂದ ಪದ್ದಮ್ಮನನ್ನು ಭಾವ, ಮೈದ್ನ, ಅವರ ಮಡದಿಯರು, ಮಕ್ಕಳು, ನೋಡಲು ಬಂದರು. ಯಾರೂ ಸೈತ ನೀನು ಎಲ್ಲೋಗಿದ್ದೆ, ಯಾಕೋಗಿದ್ದೆ ಅಂತ ಒಂದು ಮಾತಾಡಲಿಲ್ಲ. ಯಾಕೆಂದರೆ ಒಂದೇ ವಾರಕ್ಕೆ ಮೂರ್ತಪ್ಪನನ್ನು ಸಂಭಾಳಿಸಲು ಅವರಿಗೆ ನರಕ ದರ್ಶನವಾಗಿಬಿಟ್ಟಿತ್ತು.

ಮೂರ್ತಪ್ಪ ಮಡದಿಯನ್ನು ನೋಡಿದೊಡನೇ ಜೋರಾಗಿ ಅಳಲು ಶುರುಮಾಡಿದ. ಕಣ್ಣು, ಮೂಗಿನಲ್ಲಿ ನೀರು ಸುರಿಯತೊಡಗಿತು. ಭಾವನ ಮನೆಗೆ ಹೋಗಿ ಅನ್ನಸಾರು ತಂದು ಕೊಟ್ಟಳು. ಮೂಗಲ್ಲಿ ಸೊರಸೊರ ಸದ್ದು ಮಾಡುತ್ತಲೇ ಗಬಗಬನೆ ತಿನ್ನತೊಡಗಿದ. ಅವನನ್ನು ನೋಡಿ ಪದ್ದಮ್ಮನಿಗೆ ಪಿಚ್ಚೆನಿಸಿತು.

ಈಗ ಮೂರ್ತಪ್ಪ ಪದ್ದಮ್ಮನನ್ನು ಬೈಯುತ್ತಿರಲಿಲ್ಲ. ತನ್ನನ್ನೇ ಹೀಯಾಳಿಸಿಕೊಳ್ಳುತ್ತಿದ್ದ. ಕೂಗಾಟ, ಅಳು ನಿರಂತರವಾಗಿದ್ದವು. ನಿದ್ದೆ ಎಂಬುದು ಕನಿಷ್ಠವಾಯಿತು. ಅರ್ಥವಿಲ್ಲದ ಸದ್ದುಗಳು ಅವನ ಬಾಯಿಂದ ತುಪುತುಪನೆ ಉದುರುತ್ತಿದ್ದವು. ಅವರ ಮನೆಯೊಂದು ಶಬ್ದೋತ್ಪಾದನೆಯ ಗೂಡಾಗಿತ್ತು. ಈ ಸದ್ದುಗಳ ನಡುವೆಯೇ ಪದ್ದಮ್ಮನ ಬದುಕು ಸವೆಯುತ್ತಿತ್ತು. ಆಕೆಗೆ ನಿದ್ದೆ ಎಂಬುದು ಮರೀಚಿಕೆ. ಅವಳು ಮಾತಾಡುವುದನ್ನೇ ಮರೆತಂತಿತ್ತು. ಮದುವೆಯಾದಾಗಿನಿಂದಲೂ ಇವರ ಸಂಸಾರವನ್ನು ಕಂಡಿದ್ದ ವೆಂಕಟಮ್ಮ ದಿನಕ್ಕೊಮ್ಮೆಯಾದರೂ ಅವಳನ್ನು ಮಾತಾಡಿಸುವ ಪ್ರಯತ್ನ ಮಾಡುತ್ತಿದ್ದಳು. ಆಗೆಲ್ಲಾ ಹೂಂ, ಉಹೂಂ ಅಷ್ಟೇ. ಅವಳೊಳಗಿನ ಅಳುವೂ ನಶಿಸಿಹೋಗಿತ್ತು. ಆಕೆಯ ಕಣ್ಣುಗಳು ಮರುಭೂಮಿಯಾಗಿಬಿಟ್ಟಿದ್ದವು.

ಆವತ್ತು ರಾತ್ರಿ ಯಾವತ್ತಿನಂತೆ ಗಂಡನಿಗೆ ಉಣ್ಣಲು ಕೊಟ್ಟಳು. ದಿವಾನ ಕಾಟಿನ ಬಳಿ ಕುಂತಿದ್ದವಳಿಗೆ ಜೋಂಪು ಹತ್ತಿತು. ನೆಲದ ಮೇಲೆ ಹಾಗೇ ಉರುಳಿಕೊಂಡಳು.

ನಡುರಾತ್ರಿ. ಮೂರ್ತಪ್ಪ ಗಂಟಲಿನಲ್ಲೇ ಗೊರಗುಟ್ಟತೊಡಗಿದ. ಮಾತಾಡಲು ಹೋದರೆ ಸದ್ದೇ ಹೊರಡುತ್ತಿಲ್ಲ. ದಾವರವಾಯಿತು. ಬಲಗಡೆಗೆ ಬಾಗಿಲ ಬಳಿ ನೀರಿನ ಚೊಂಬಿತ್ತು. ಅದರತ್ತ ಕೈಚಾಚಿದ, ಕಣ್ಣುಗುಡ್ಡೆಗಳು ದೊಡ್ಡದಾಗಿ ತೆರೆದುಕೊಂಡವು. ಅಷ್ಟೇ, ಉಸಿರು ನಿಂತುಹೋಯಿತು.

***

'ಹರಾ ನಮಹ್ ಪಾರ್ವತಿ ಪತಯೇ ಹರ ಹರ ಮಹದೇವ' ಎನ್ನುತ್ತಾ ಹೆಣ ಹೊತ್ತ ಗುಂಪು ದಫನು ಮಾಡಲು ಹೋದ ಎಷ್ಟೋ ಹೊತ್ತಿನ ಬಳಿಕ ಪದ್ದಮ್ಮನ ದೇಹ ನಿದ್ದೆಯಲ್ಲಿಯೇ ಮಗ್ಗುಲು ಬದಲಾಯಿಸಿತು. ಹೆಣಕ್ಕೆ ಮಣ್ಣು ತೋರಿಸಿ ಬೇಗ ವಾಪಸಾದ ವೆಂಕಟಮ್ಮ ನಡುಮನೆಯ ಎದುರು ಗೋಡೆಯ ಮುಂದೆ ಸಗಣಿಯಿಂದ ಇಷ್ಟಗಲ ಸಾರಿಸಿ ಎರಡು ಮೊರಗಳನ್ನು ಗೂಡಿನಂತೆ ಮಾಡಿ ನಡೂ ಮಧ್ಯ ಒಂದು ಮಣ್ಣಿನ ದೀಪ ಹಚ್ಚಿಟ್ಟಳು. ದೀಪವು ಕುಡಿ ಆಡಿಸದಂತೆ ಉರಿಯತೊಡಗಿತು. ಮಗ್ಗಲು ಬದಲಾಯಿಸಿದ್ದ ಪದ್ದಮ್ಮನ ಮುಖವೂ ದೀಪದ ಪಕ್ಕದಲ್ಲಿಯೇ ಇತ್ತು.

ದಫನು ಮಾಡಿ ಬಂದವರು ಒಬ್ಬೊಬ್ಬರೇ ಅಂಗಳದಲ್ಲಿ ಕಾಲಿಗೆ ಎರಡು ಚೊಂಬು ನೀರು ಹಾಕಿಕೊಂಡು ತಲೆಗೆ ನಾಲ್ಕು ಹನಿ ಚಿಮುಕಿಸಿಕೊಂಡು ಬಾಗಿಲ ಬಳಿ ನಿಂತು ನೋಡಿದರೆ ದೀಪ ಮತ್ತು ಪದ್ದಮ್ಮನ ಮುಖ ಒಟ್ಟಿಗೇ ಕಾಣುತ್ತಿದ್ದವು. ಅವರು ಸಣಮಾಡಿಕೊಂಡು ಹಿಂತಿರುಗಿ ನೋಡದೆ, ಯಾರಿಗೂ ಹೇಳದೆ ಹೋಗತೊಡಗಿದರು.



ಪ್ರತಿಕ್ರಿಯಿಸಿ: **feedback@sudha.co.in**